


# ವಿಲಾರ್ಸ್ ಎಂಬ ಸ್ವರ್ಗ!

**ಇಲ್ಲಿರುವುದು ಒಂದೇ ಮುಖ್ಯ ಬೀದಿ; ಆದರೆ ಬಾಲಿವುಡ್ ಹೀರೊ ಅಭಿಷೇಕ್ ಬಚ್ಚನ್ ಓದಿದ ಶಾಲೆ ಇಲ್ಲಿದೆ! ಇಲ್ಲಿನ ರಾಷ್ಟ್ರೀಯ ದಿನಾಚರಣೆಯಲ್ಲಿ ಹಸುಗಳೇ ಮುಖ್ಯ. ಇಲ್ಲಿ ಸ್ಥಳೀಯ ಪ್ರಯಾಣ ಎಲ್ಲರಿಗೂ ಉಚಿತ!**

■ ಚಿತ್ರ ಲೇಖನ:
**ವಿ.ಪ್ರದೀಪ್‌ಕುಮಾರ್**

ವಿಲಾರ್ಸ್ ಸ್ವಿಝರ್ಲ್ಯಾಂಡಿನ ಪ್ರಕೃತಿ ಸಂಪದ್ಭರಿತ ಪುಟ್ಟ ಹಿಲ್ ಸ್ಟೇಶನ್. ಸಮುದ್ರಮಟ್ಟದಿಂದ ಸುಮಾರು 8000 ಅಡಿಗಳಷ್ಟು ಎತ್ತರದಲ್ಲಿರುವ ವಿಲಾರ್ಸ್, ಆಲ್ಫ್ ಪರ್ವತ ಶ್ರೇಣಿಯಲ್ಲಿದ್ದು, ಸ್ವಿಝರ್ಲ್ಯಾಂಡ್, ಆಸ್ಟ್ರಿಯ ಮತ್ತು ಜರ್ಮನಿಯ ಗಡಿಯಲ್ಲಿದೆ. ಜಗತ್ತಿನ ಸುಪ್ರಸಿದ್ಧ ಪ್ರವಾಸಿ ತಾಣ ಲೇಕ್ ಜಿನೀವಾ ಪ್ರದೇಶದಲ್ಲಿದೆ. ಹಿಂದಿನ ದಿನ ನಾವಿದ್ದ ಇಂಟರ್ಲಾಕೆನ್ ಪಟ್ಟಣದಿಂದ, ಲೂಸರ್ನ್ ಮೂಲಕ ದಿನವಿಡೀ ಪ್ರಯಾಣದ ನಂತರ ವಿಲಾರ್ಸ್ ಸೇರಿದಾಗ, ಆಕಾಶದಲ್ಲಿ ಸಂಜೆಗೆಂಪು ಮೂಡಿತ್ತು.

ವಿಲಾರ್ಸ್ ಸ್ವಿಝರ್ಲ್ಯಾಂಡಿನ ಸುಂದರ ತಾಣವೊಂದೇ ಅಲ್ಲ; ಜಗತ್ತಿನ ಪ್ರತಿಷ್ಠಿತ ಶ್ರೀಮಂತರ ಮಕ್ಕಳು ಓದುವ ತಾಣವೂ ಹೌದು. ಬಾಲಿವುಡ್ ನಟ ಅಭಿಷೇಕ್ ಬಚ್ಚನ್ ಓದಿದ ಐಗ್ಲೊ ಶಾಲೆ ಇರುವುದು ಇಲ್ಲೇ. ವಿಲಾರ್ಸ್‌ನ ವಿಶೇಷತೆಯ ಬಗ್ಗೆ ನಮ್ಮ ಪ್ರವಾಸದ ಗೈಡ್ ಮೊದಲೇ ಸೂಚನೆ ನೀಡಿದ್ದರಿಂದ, ವಿಲಾರ್ಸ್ ಬಗ್ಗೆ ಕುತೂಹಲದಿಂದಲೂ, ಕಾತುರದಿಂದಲೂ ಎದುರು ಶುಭ್ರವಾದ, ಸ್ವಚ್ಛ, ನಿರ್ಮಲ ವಾತಾವರಣ.

ಇಲ್ಲಿನ ಪ್ರಾಕೃತಿಕ ಸೌಂದರ್ಯ ದೈವದತ್ತ ಕೊಡುಗೆ. ಆದರೆ ಅದನ್ನು ಅಭಿವೃದ್ಧಿಯ ಮಧ್ಯೆಯೂ ಕಾಪಾಡಿಕೊಂಡು ಬಂದಿರುವುದು ಯೂರೋಪಿನ ವ್ಯವಸ್ಥೆಯ ಸಾರ್ಥಕತೆ. ಪರಿಸರ ಸಂರಕ್ಷಣೆಯ ಕಾಳಜಿಯಂತೂ ಅದ್ಭುತವೇ. ಯೂರೋಪಿನಲ್ಲಿ ಎಲ್ಲಿ ಹೋದರೂ ಸಾಮಾನ್ಯವಾಗಿ ನಮ್ಮ ಗಮನ ಸೆಳೆಯುವ ಅಂಶವೇ ಇದು.

ವಿಲಾರ್ಸ್ ಬೇರೆಲ್ಲ ಯೂರೋಪಿನ ಪ್ರೇಕ್ಷಣೀಯ ಸ್ಥಳಗಳಂತಲ್ಲ. ಬೆಳಗಾದೊಡನೆ ಶಾಲೆ, ಕಾಲೇಜಿನ ವೇಳಾಪಟ್ಟಿಯಂತೆ, ಕಿರಿಕಿರಿ ಉಂಟಾಗುವಂತೆ, ಸಮಯದ ನಿರ್ವಹಣೆಯ ಒತ್ತಡವನ್ನು ಗೈಡ್ ಹೇರುವ ಅವಶ್ಯಕತೆಯೂ ಇಲ್ಲ. ಏಕೆಂದರೆ ಇಲ್ಲಿರುವುದು, ಅನುಭವಿಸ ಬೇಕಾಗಿರುವುದು ಇಲ್ಲಿನ ಪರಿಸರದ ಸೌಂದರ್ಯ. ಜತೆಗೆ ಇಲ್ಲಿ ಮಾಡಬಹುದಾದ ಅನೇಕ ಆರೋಗ್ಯಕರ ಚಟುವಟಿಕೆಗಳಿವೆ. ಇದೊಂದು ಗಡಿಬಿಡಿಯ ಪ್ರವಾಸದ ನಡುವೆ, ಮನಸ್ಸಿಗೂ, ದೇಹಕ್ಕೂ ಆರಾಮವನ್ನು ನೀಡಿ, ನಮ್ಮ ಯೌವನವನ್ನು



ನೋಡುತ್ತಿದ್ದುದಂತೂ ನಿಜ.

ಪ್ರವಾಸಿಗರ ಪಾಲಿಗೆ ಇದು ಜಗತ್ಪ್ರಸಿದ್ಧವಾದರೂ, ಈ ಊರಿನಲ್ಲಿ ಇರುವುದೊಂದೇ ಮುಖ್ಯ ಬೀದಿ! ಅದರಲ್ಲೇ ಪುಟ್ಟ ರೈಲು ನಿಲ್ದಾಣ, ಒಂದಷ್ಟು ಅಂಗಡಿಗಳು ಮತ್ತು ಹೋಟೆಲ್‌ಗಳು. ಮಾರನೇ ದಿನ ಬೆಳಿಗ್ಗೆ ಬಿಸಿ ಕಾಫಿ ಕುಡಿದು ತಣ್ಣಗೆ ಕೊರೆಯುವ ಚಳಿಯಲ್ಲಿ ಹೊರ ಹೊರಟೆವು. ರಾತ್ರಿ ಬಿದ್ದಿದ್ದ ಮಂಜನ್ನು ತೆಗೆದು ರಸ್ತೆ ತೆರವು ಮಾಡಲಾಗಿತ್ತು. ಇಬ್ಬನಿಯ ಭಾರದಿಂದ ಬಾಗಿದ ಹಸಿರುಗೆಂಪು ಎಲೆಗಳು, ರಸ್ತೆಯ ಬದಿಯ ಕುಂಡಗಳಲ್ಲಿ ಕಂಗೊಳಿಸುತ್ತಿದ್ದ ಗುಲಾಬಿ, ಟ್ಯೂಲಿಪ್ ಹೂಗಳ ಸಂಭ್ರಮ! ಎಲ್ಲೆಲ್ಲೂ ಪುನರುಜ್ಜೀವನಗೊಳಿಸುವ ತಾಣ. ಜೊತೆಗೆ, ಮದುವೆಯ ಹೊಸ ಜೀವನದ ಅಂಚಿನಲ್ಲಿ ಇರುವವರಿಗೆ, ಮಧುಚಂದ್ರಕ್ಕೆ ಯಾವ ತಾಣಕ್ಕೆ ಹೋಗಬೇಕೆನ್ನುವ ಗೊಂದಲದಲ್ಲಿ ಇರುವವರಿಗೆ ಇದು ನಿಜಕ್ಕೂ ಪ್ರಶಸ್ತ ತಾಣ.

ಯೂರೋಪಿನ ಬೇಸಿಗೆ ಮತ್ತು ಚಳಿಗಾಲದ ಚಟುವಟಿಕೆಗಳು ವಿಭಿನ್ನ; ಋತುಮಾನ, ನಮ್ಮ ಸಾಮರ್ಥ್ಯ, ಆಸಕ್ತಿಗೆ ಅನುಗುಣವಾಗಿ ಅದನ್ನು ಇಲ್ಲಿ ನಾವೇ ನಿರ್ಧರಿಸಬೇಕು.

ವಾಕಿಂಗ್: ಇಲ್ಲಿನ ಹಸಿರು ವನರಾಶಿಯ ನಡುವೆ, ನೂರಾರು ಕಿ.ಮೀ.ಗಳಷ್ಟು ಸಿದ್ಧಗೊಳಿಸಿದ ಕಾಲುದಾರಿಗಳಿವೆ ಎಂದರೆ ಆಶ್ಚರ್ಯವಾದೀತು. ಅಷ್ಟೇ ಅಲ್ಲ;

ಹಾದಿಗಳ ಉದ್ದಕ್ಕೂ ಮಾಹಿತಿ ಫಲಕಗಳಿವೆ. ಆದ್ದರಿಂದ, ನಮ್ಮ ಚೈತನ್ಯಕ್ಕೂ, ಸಮಯಕ್ಕೂ ಅನುಗುಣವಾಗಿ ಮಾರ್ಗಗಳ ಆಯ್ಕೆ ಸುಗಮ.

ಟ್ರೆಕ್ಕಿಂಗ್: ವಿಲಾರ್ಸ್‌ನ ಸುತ್ತಮುತ್ತಲಿನ ಬೆಟ್ಟ– ಗುಡ್ಡಗಳ, ಸರೋವರ–ನದೀಪಾತ್ರಗಳ, ಕಾಡು ಪ್ರದೇಶಗಳಲ್ಲಿ, ಸುಮಾರು 300 ಕಿ.ಮೀ.ನಷ್ಟು ಉದ್ದನೆಯ ಸುರಕ್ಷಿತವಾದ ಟ್ರೆಕ್ಕಿಂಗ್‌ಗೆ ಹೇಳಿ ಮಾಡಿಸಿದಂತಹ ಮಾರ್ಗಗಳಿವೆ. ಮನಸೂರೆಗೊಳ್ಳುವ ವಿಹಂಗಮ ನೋಟದ ಈ ಪ್ರದೇಶದಲ್ಲಿ ಅನುಭವಿಗಳಿಗೂ, ಹೊಸಬರಿಗೂ ಅನುಕೂಲವಾಗುವಂತೆ ಟ್ರೆಕ್ಕಿಂಗ್ ಹಾದಿಗಳನ್ನು ಸಿದ್ಧಪಡಿಸಲಾಗಿದೆ. ಹಾಂ! ಯಾವ ಹಾದಿಯಲ್ಲಿ ಹೋಗಬೇಕೆನ್ನುವ ನಿರ್ಧಾರವೂ ಅಷ್ಟೇ ಸುಲಭ. ಏಕೆಂದರೆ, ಸಮಯ, ನಡೆದಾಡುವ ಕಷ್ಟಗಳನ್ನು ಆಧರಿಸಿ ಮಾರ್ಗಗಳ ವರ್ಗೀಕರಣ ಮಾಡಲಾಗಿದೆ. ವಯಸ್ಸಿನ ಇತಿ–ಮಿತಿ, ಥೀಮ್‌ಗಳ ಆಯ್ಕೆಗಳಿಂದ ನಿರ್ಧರಿಸಬಹುದಾದ 'ಸರ್ಚ್ ಎಂಜಿನ್' ಕೂಡಾ ಇದೆ. ಟ್ರೆಕ್ಕಿಂಗ್‌ನ ಹುಚ್ಚು ಇರುವವರಿಗೆ ಮಾತ್ರವಲ್ಲ, ಹೊಸಬರಿಗೂ ಇದು ಅನುಕೂಲವೇ. ಹಾಗೆಯೇ, ಈ ಪರ್ವತಗಳಿಂದ ಕೆಳಗಿಳಿದರೆ ಲೇಕ್‌ಜಿನೀವಾ ಪ್ರದೇಶವನ್ನು ಸೇರಬಹುದು. ಆದರೆ, ಬೇಸಿಗೆ ಕಾಲದಲ್ಲಿ ಮಾತ್ರ ಇಲ್ಲಿ ಟ್ರೆಕ್ಕಿಂಗ್ ಸಾಧ್ಯ.

ಸೈಕ್ಲಿಂಗ್: ಪ್ರವಾಸದ ಮೋಜಿಗಾದರೂ ಸರಿ; ವ್ಯಾಯಾಮಕ್ಕಾದರೂ ಸರಿ– ಸೈಕ್ಲಿಂಗ್ ಇಡೀ ಯೂರೋಪಿನಲ್ಲಿ ಅತ್ಯಂತ ಜನಪ್ರಿಯ. ವಾರಾಂತ್ಯದಲ್ಲಿ ಕಾರುಗಳ ಹಿಂದೆ ಮತ್ತು ರೈಲುಗಳಲ್ಲಿ, ಸೈಕಲ್‌ಗಳನ್ನು ಸಾಗಿಸಿಕೊಂಡು






ಹೋಗುವುದನ್ನು ನೋಡಿದರೆ ಈ ಮಾತು ಮನದಟ್ಟಾಗುತ್ತದೆ. ವಿಲಾರ್ಸ್‌ನಲ್ಲಿ ಆಲ್ಪ್ಸ್ ಪರ್ವತದ ಹಳ್ಳಿಗಾಡು ಮತ್ತು ಕಣಿವೆಗಳ ಮೂಲಕ ಹೋಗುವ 130 ಕಿ.ಮೀ. ನಷ್ಟು ಉದ್ದದ ಸೈಕ್ಲಿಂಗ್ ಹಾದಿಗಳಿವೆ.

ಸ್ಕೀಯಿಂಗ್: ಸ್ಕೀಯಿಂಗ್‌ನಲ್ಲಿ ನಮಗೆ ಆಸಕ್ತಿ ಇರಬಹುದು; ಆದರೆ ಕೌಶಲ ಇಲ್ಲದಿರಬಹುದು. ಹಾಗಾಗಿಯೇ ಇಲ್ಲಿ ಸ್ಕೀಯಿಂಗ್ ಕೌಶಲವನ್ನು ಕಲಿಸುವ ಅನೇಕ ಶಾಲೆಗಳಿವೆ. ಪ್ರವಾಸದ ಮೋಜಿನ ಜೊತೆಯಲ್ಲಿ ವಿಶಿಷ್ಟವಾದ ಕೌಶಲವನ್ನು ಕಲಿತು ಬಂದರೆ ಜೀವನ ಪರ್ಯಂತ ಉಪಯುಕ್ತ ಆಗಬಹುದು.

ವಿಲಾರ್ಸ್ ಸುತ್ತಮುತ್ತ ಟೆನ್ನಿಸ್, ಗಾಲ್ಫ್, ಸ್ಕೇಟಿಂಗ್, ಜಲಕ್ರೀಡೆಗಳು, ಪ್ಯಾರಾಗ್ಲೈಡಿಂಗ್, ಸ್ಕೂಬಾ ಡೈವಿಂಗ್, ಬೌಲಿಂಗ್ ಇತ್ಯಾದಿ ಕ್ರೀಡೆಗಳನ್ನು ಶಾಸ್ತ್ರೋಕ್ತವಾಗಿ ಕಲಿಯುವ, ಆಡುವ ಅವಕಾಶಗಳಿವೆ. ವಿಲಾರ್ಸ್‌ನಿಂದ ಲೇಕ್ ಜಿನೀವಾ ಹತ್ತಿರದಲ್ಲಿರುವ ಅನೇಕ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ ನೀಡಬಹುದು. ಹಾಗಾಗಿ ಇಲ್ಲಿ ಚಟುವಟಿಕೆಗಳಿಗೆ ಯಾವುದೇ ಮಿತಿಯಿಲ್ಲ; ಆ ಮಿತಿ ನಮ್ಮ ಅಭಿರುಚಿ, ಆಸಕ್ತಿಯಲ್ಲಿ ಮಾತ್ರ.

ವಿಲಾರ್ಸ್‌ನಿಂದ ಹತ್ತಿರದಲ್ಲಿದ್ದು ಒಂದು ದಿನದ ಪ್ರವಾಸಕ್ಕೆ ಸೂಕ್ತ ಸ್ಥಳಗಳ ಪಟ್ಟಿ ಹೀಗಿದೆ:

ಪರ್ವತ ಶ್ರೇಣಿಗಳು: ಜಗತ್ತಿನ ಅತ್ಯಂತ ಸುಂದರ ಪರ್ವತವೆಂದು



ಪರಿಗಣಿಸಲಾಗುವ ಮಾಂಟ್ ಬ್ಲಾಂಕ್, ಸಮುದ್ರ ಮಟ್ಟದಿಂದ 15,771 ಅಡಿ ಎತ್ತರದಲ್ಲಿದ್ದು, ಉತ್ತರ ಆಲ್ಪ್ ಪರ್ವತ ಶ್ರೇಣಿಯಲ್ಲಿದೆ. ಫ್ರಾನ್ಸ್‌ನ ಮಾಂಟ್ ಬ್ಲಾಂಕ್‌ಗೆ ವಿಲಾರ್ಸ್‌ನಿಂದ ಸುಮಾರು ಒಂದು ಗಂಟೆಯ ಪ್ರಯಾಣ. ಅದೇ ರೀತಿ ಸ್ವಿಝರ್ಲೆಂಡಿನ ಜನಪ್ರಿಯ ತಾಣಗಳಾದ ಉಂಘ್ರಾಫ್ ಮತ್ತು ಝರ್ಮಾಟ್‌ಗೆ ಇಲ್ಲಿಂದ ಎರಡೂವರೆ ಗಂಟೆಗಳ ಪ್ರಯಾಣ.

ವಿಲಾರ್ಸ್‌ಗೆ ಅಂತರಾಷ್ಟ್ರೀಯ ಸಂಸ್ಥೆಗಳ ತವರೂರಾದ ಜಿನೀವಾಗೆ ಒಂದೂವರೆ ಗಂಟೆಯ ದೂರವಾದರೆ, ರಾಜಧಾನಿ ಬರ್ನ್‌ಗೂ ಒಂದೂವರೆ ಗಂಟೆಯ ಪ್ರಯಾಣ. ಈ ಎರಡೂ ನಗರಗಳಲ್ಲಿ ಅನೇಕ ಪ್ರಸಿದ್ಧ ಸ್ಥಳಗಳಿವೆ. ಚಲನಚಿತ್ರಗಳ ಶೂಟಿಂಗ್‌ಗೆ ಪ್ರಶಸ್ತ ನಗರಗಳಾದ ಇಂಟರ್‌ಲಾಕೆನ್‌ಗೆ 2 ಗಂಟೆ ಮತ್ತು ಲೂಸರ್ನ್‌ಗೆ ಎರಡೂವರೆ ಗಂಟೆಗಳಲ್ಲಿ ಹೋಗಿ ಬರಬಹುದು.

## ಪರಿಸರ ಕಾಳಜಿ

ವಿಲಾರ್ಸ್ ಟೂರಿಸಮ್‌ನವರು ಅನುಷ್ಠಾನಗೊಳಿಸಿರುವ ಅನೇಕ ಯೋಜನೆಗಳು, ಕಾರ್ಯಗಳು ಪರಿಸರ ಸಂರಕ್ಷಣೆಗೆ ಪೂರಕವಾಗಿವೆ. ಮೂರು ಪರ್ವತ ಶ್ರೇಣಿಗಳ ಮಾರ್ಗಗಳಿಂದ ರಚಿಸಿರುವ ಟ್ರೆಶರ್ ಹಂಟ್ ಪ್ರವಾಸಿಗಳಿಗೊಂದು ಆಕರ್ಷಕ ಮತ್ತು ಕುತೂಹಲಭರಿತ ಚಟುವಟಿಕೆ. ಇಲ್ಲಿನ ಟೂರಿಸ್ಟ್ ಕಛೇರಿಯಲ್ಲಿ ಹೆಸರು ನೋಂದಾಯಿಸಿ, ಟ್ರೆಶರ್ ಹಂಟ್ ಮಾರ್ಗಗಳಲ್ಲಿ ಇರುವ ಅನೇಕ ಸೂಚನೆಗಳನ್ನು ಪಾಲಿಸಿ, ಪ್ರಶ್ನೆಗಳನ್ನು ಉತ್ತರಿಸಿದರೆ ಸಾಕು; ಪ್ರತಿ ವಾರ ಆಕರ್ಷಕ ಬಹುಮಾನಗಳನ್ನು ಗೆಲ್ಲುವ ಅವಕಾಶವಿದೆ.

ವಿಶೇಷವೆಂದರೆ, ಇಲ್ಲಿ ಸ್ಥಳೀಯ ಪ್ರಯಾಣ ಉಚಿತ! ಪ್ರವಾಸೋದ್ಯಮವನ್ನು ಇನ್ನಷ್ಟು ಉತ್ತೇಜಿಸಲು ಪ್ರವಾಸಿಗಳಿಗೆ ಉಚಿತ ಪಾಸ್ ನೀಡುತ್ತಾರೆ. ಜೊತೆಗೆ ಮಕ್ಕಳಿಗಾಗಿ ಡ್ರಾಯಿಂಗ್ ಸ್ಪರ್ಧೆಗಳು, ಛಾಯಾಚಿತ್ರ ಪ್ರದರ್ಶನಗಳನ್ನು ಏರ್ಪಡಿಸಿ, ಪರಿಸರ ಸಂರಕ್ಷಣೆಗೆ ಬಗ್ಗೆ ಸಕಾರಾತ್ಮಕ ಮನೋಭಾವ ಬೆಳೆಸುವಲ್ಲೂ ಯಶಸ್ವಿಯಾಗಿದ್ದಾರೆ.

## ವಿಲಾರ್ಸ್ ಚಾಕೋಲೇಟ್

ವಿಲಾರ್ಸ್ ಎಂಬ ಹೆಸರಿನಲ್ಲೇ ಪ್ರಖ್ಯಾತವಾದ 112 ವರ್ಷಗಳ ಇತಿಹಾಸವುಳ್ಳ ಚಾಕೊಲೇಟ್ ಕಂಪೆನಿ ಇಲ್ಲಿದೆ. ಆಲ್ಪ್ ಪರ್ವತ ಶ್ರೇಣಿಯೇ ಹೆಚ್ಚಾಗಿರುವ ಈ ದೇಶದಲ್ಲಿ ಸಾಗುವಳಿ ಮಾಡಬಹುದಾದ ಭೂಮಿ ಕೇವಲ ಶೇಕಡಾ 10 ಮಾತ್ರ. ಆದರೆ ಹೈನುಗಾರಿಕೆ ಅತ್ಯಂತ ಜನಪ್ರಿಯ. ಉದಾಹರಣೆಗೆ, ಕರ್ನಾಟಕದ ಕಾಲು ಭಾಗದಷ್ಟಿರುವ ಸ್ವಿಝರ್ಲೆಂಡ್‌ನ 32 ಸಾವಿರ ಹೈನುಗಾರಿಕೆ ಕೇಂದ್ರಗಳಲ್ಲಿ 6 ಲಕ್ಷಕ್ಕೂ ಹೆಚ್ಚು ಹಸುಗಳಿದ್ದು, ವರ್ಷಕ್ಕೆ ಸುಮಾರು 4 ದಶಲಕ್ಷ ಟನ್ ಹಾಲು ಉತ್ಪಾದನೆಯಾಗುತ್ತದೆ. ಜಗತ್ತಿನಾದ್ಯಂತ ಉತ್ಕೃಷ್ಟತೆಗೆ ಹೆಸರಾದ ಸ್ವಿಸ್ ಚಾಕೊಲೇಟ್‌ನ ಬೆನ್ನೆಲುಬೇ ಇಲ್ಲಿನ ಡೈರಿ ಉದ್ಯಮ. ಕೌಟುಂಬಿಕ ವೃತ್ತಿಯಾದ ಇಲ್ಲಿನ ಹೈನುಗಾರಿಕೆ ಫಾರ್ಮ್‌ಗಳಲ್ಲಿ ಹಸುಗಳ ಹಿಂಡುವ ಪ್ರಮಾಣ ಇತ್ತೀಚಿನ ವರ್ಷಗಳಲ್ಲಿ ಹೆಚ್ಚಾಗಿದೆ. ಅತ್ಯಾಧುನಿಕ ತಂತ್ರಜ್ಞಾನವನ್ನು ಪ್ರತಿ ಹಂತದಲ್ಲೂ ಬಳಸುತ್ತಾರೆ. ಉದಾಹರಣೆಗೆ, 50ಕ್ಕೂ ಹೆಚ್ಚು ಹಸುಗಳಿರುವ ಫಾರ್ಮ್‌ಗಳಲ್ಲಿ ಹಾಲು ಕರೆಯಲು ಸ್ವಯಂಚಾಲಿತ ರೊಬೋಟಿಕ್ ಯಂತ್ರಗಳನ್ನು ಬಳಸುತ್ತಾರೆ.

## ಹಸುಗಳೇ ಹೀರೊ!

ಇಲ್ಲಿ ಅತ್ಯಂತ ಜನಪ್ರಿಯ ಹಸು ತಳಿಯೆಂದರೆ ಕಂದು ಬಣ್ಣದ ಸ್ವಿಸ್. ಸಾಮಾನ್ಯವಾಗಿ ಬೇಸಿಗೆ ಕಾಲದಲ್ಲಿ ಮೇಲ್ಮಟ್ಟದ ಪರ್ವತಗಳಲ್ಲಿ ಮೇಯುವ ಹಸುಗಳನ್ನು ಚಳಿಗಾಲದ ಮುಂಚೆ ಬೆಚ್ಚಗಿನ ಕೆಳಮಟ್ಟದ ಪ್ರದೇಶಕ್ಕೆ ಕರೆತರಲಾಗುತ್ತದೆ. ಪ್ರತಿ ವರ್ಷದ ಆಗಸ್ಟ್ 1ರಂದು, ದೇಶದ ಇನ್ನಿತರ ಕಡೆಗಳಂತೆ, ವಿಲಾರ್ಸ್‌ನ ಜನರೆಲ್ಲರೂ ಸೇರಿ ರಾಷ್ಟ್ರೀಯ ದಿನ ಆಚರಿಸುತ್ತಾರೆ. ಸ್ವಿಝರ್ಲೆಂಡಿನ ಅಪೂರ್ವ ಆಲ್ಫರ್ನ್ ವಾದ್ಯವನ್ನು ನುಡಿಸುತ್ತಾ ಪಟ್ಟಣದ ಉದ್ದಕ್ಕೂ ಸಾಗುವ  ಈ ಸಂಭ್ರಮದ ಮೆರವಣಿಗೆಯಲ್ಲಿ, ಅಲಂಕೃತ ಹಸುಗಳು ಹೀರೋಗಳಂತೆ ಭಾಗಿಯಾಗುವುದು ಇಲ್ಲಿನ ವಿಶೇಷ. ಹೀಗಾಗಿಯೇ ಹಸು ಸ್ವಿಝರ್ಲೆಂಡಿನ ಅನಧಿಕೃತ ರಾಷ್ಟ್ರೀಯ ಪ್ರಾಣಿಯೇ ಸರಿ.

ವಿಲಾರ್ಸ್ ಸೇರಿದಂತೆ ಸ್ವಿಝರ್ಲೆಂಡಿಗೆ ವರ್ಷದ ಯಾವುದೇ ಸಮಯದಲ್ಲಿ ಹೋಗಬಹುದು. ಆದರೆ ಪರ್ವತ ಶ್ರೇಣಿಗಳಲ್ಲಿ ವರ್ಷವಿಡೀ ಅತಿಯಾದ ಚಳಿ ಇರುವುದರಿಂದ, ಸೂಕ್ತ ತಯಾರಿ ಇರಲೇಬೇಕು. ಆದರೆ ಈ ದೇಶದಲ್ಲಿ ಶಾಪಿಂಗ್ ಭಾರೀ ದುಬಾರಿ; ಇಲ್ಲಿನ ಸುಪ್ರಸಿದ್ಧ ಕೈಗಡಿಯಾರಗಳು ಮಾತ್ರ ದುಬೈನಲ್ಲಿ ಅಗ್ಗ! ಇಲ್ಲಿನ ಪ್ರವಾಸದಿಂದ ವಾಪಸ್ ಬರುವಾಗ ಚಾಕೊಲೇಟ್ ಮತ್ತು ಮಾದರಿ ಹಸು ಗಂಟೆಗಳನ್ನು ಮಾತ್ರ ತರುವುದು ವಾಡಿಕೆ.

ನಮ್ಮಲ್ಲಿ ಪ್ರಾಕೃತಿಕ ಸೌಂದರ್ಯದ ವೈವಿಧ್ಯತೆ ಮತ್ತು ವೈಶಿಷ್ಟ್ಯ ಅದ್ವಿತೀಯ. ಆದರೆ, ಪ್ರವಾಸೋದ್ಯಮದ ಹೆಸರಿನಲ್ಲಿ ಪರಿಸರ ನಾಶವಾಗುತ್ತಿರುವುದು ವಿಷಾದಕರ. ಉತ್ತರ ಭಾರತದಲ್ಲಿ ಅಭಿವೃದ್ಧಿಯ ಹೆಸರಿನಲ್ಲಿ, ಪರಿಸರದ ಕಾಳಜಿಯಿಲ್ಲದೆ ಜಾರಿಯಾಗಿರುವ ಅನೇಕ ಯೋಜನೆಗಳ ದುಷ್ಪರಿಣಾಮಗಳಿಂದ ಇತ್ತೀಚೆಗಷ್ಟೇ ಹಿಮಾಲಯ ಪರ್ವತಶ್ರೇಣಿಯಲ್ಲಿ ಅನಾಹುತಗಳೂ ನಡೆದವು. ಊಟಿ, ಸಿಮ್ಲಾಗಳಂತಹ ಸುಂದರ ಹಿಲ್ ಸ್ಟೇಷನ್‌ಗಳಲ್ಲೂ ಪರಿಸರ ಮಾಲಿನ್ಯ ಹೆಚ್ಚಾಗುತ್ತಿದೆ. ನಾವು ಮತ್ತು ನಮ್ಮ ಸರಕಾರ, ಯೂರೋಪಿನಿಂದ ಕಲಿಯುವುದು ಸಾಕಷ್ಟಿದೆ.